# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 46(18)
ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ(ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ : 04-12-2023
ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | 2013ನೇ ಸಾಲಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ನೇಮಕಗೊಂಡ ಉಪನ್ಯಾಸಕರನ್ನು ಸರ್ಕಾರವೇ ಬಿ.ಇಡಿ ವ್ಯಾಸಂಗಕ್ಕೆ ಅವಕಾಶ ಮಾಡಿಕೊಟ್ಟಿದ್ದು, ಬಿ ಇಡಿ ಅವಧಿಯಲ್ಲಿ 'ಡೈಸ್ ನಾನ್' ಎಂದು ಪರಿಗಣಿಸಿದ್ದು ನಂತರದ ಆದೇಶದಲ್ಲಿ 'ಡೈಸ್ ನಾನ್' ಎನ್ನುವುದನ್ನು ತೆಗೆದು ಹಾಕಿರುವುದಿಂದ ಸದರಿ ಬಿ.ಇಡಿ ಅವಧಿಯಲ್ಲಿ 'ಸರ್ಕಾರಿ ಸೇವಾ ಅವಧಿ' ಎಂದು ಪರಿಗಣಿಸಿ 10 ವರ್ಷ ಪೂರ್ಣಗೊಳಿಸಿರುವ ಉಪನ್ಯಾಕರಿಗೆ 10 ವರ್ಷಗಳ ಕಾಲಮಿತಿ ವೇತನ ಬಡ್ತಿಯನ್ನು ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು) | 2013ನೇ ಸಾಲಿನಲ್ಲಿ ಬಿ.ಇಡಿ ಪದವಿಯನ್ನು ಹೊಂದದೆ ಉಪನ್ಯಾಸಕರುಗಳು ಬಿ.ಇಡಿ ಪದವಿ ಶಿಕ್ಷಣ ಪಡೆಯುವ ಅವಧಿಯನ್ನು ಡೈಸ್-ನಾನ್ (DIES-NON) ಎಂದು ಪರಿಗಣಿಸಲು ವಿಧಿಸಿರುವ ಷರತ್ತನ್ನು ತೆಗೆದು ಹಾಕಿ, ಸದರಿ ಅವಧಿಯನ್ನು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ 112(9)ರ ಉಪ ನಿಯಮಗಳ ಮೇರೆಗೆ ಮಂಜೂರು ಮಾಡಬಹುದಾದ ಗರಿಷ್ಠ ಅವಧಿ 120 ದಿನಗಳ ಗಳಿಕೆ ರಜೆ ಮೀರದಂತೆ ಅವರ ಹಕ್ಕಿನಲ್ಲಿರುವ ರಜೆ ಮಂಜೂರು ಮಾಡಲು ಮತ್ತು ಬಾಕಿ ಉಳಿದಿರುವ ಅವಧಿಗೆ ವೇತನ ರಹಿತ ರಜೆ ಎಂದು ಪರಿಗಣಿಸಿ ಸರ್ಕಾರದ ಆದೇಶ ಸಂಖ್ಯೆ ಇಡಿ 189 ಟಿಪಿಯು 2015 ದಿನಾಂಕ:03-10-2018ರಲ್ಲಿ ಆದೇಶಿಸಲಾಗಿದೆ.<br><br>ಈಗಾಗಲೇ ಸದರಿ ಅವಧಿಯನ್ನು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ 112(9)ರ ಉಪ ನಿಯಮಗಳ ಮೇರೆಗೆ ಮಂಜೂರು ಮಾಡಬಹುದಾದ ಗರಿಷ್ಠ ಅವಧಿ 120 ದಿನಗಳ ಗಳಿಕೆ ರಜೆ ಮೀರದಂತೆ ಅವರ ಹಕ್ಕಿನಲ್ಲಿರುವ ರಜೆ ಮಂಜೂರು ಮಾಡಲು ಮತ್ತು ಬಾಕಿ ಉಳಿದಿರುವ ಅವಧಿಗೆ ವೇತನ ರಹಿತ ರಜೆ ಎಂದು ಪರಿಗಣಿಸಲು ಆದೇಶಿಸಲಾಗಿರುವುದರಿಂದ, ಸದರಿ ಆದೇಶದಂತೆ ಸಂಬಂಧಿಸಿದ ಉಪನ್ಯಾಸಕರ ಹಕ್ಕಿನಲ್ಲಿರುವ ಗಳಿಕೆ ರಜೆಯನ್ನು ಕಳೆದು ಉಳಿದ ದಿನಗಳಿಗೆ ವೇತನ ರಹಿತ ರಜೆ ಮಂಜೂರು ಮಾಡಿರುವ ಕಾರಣ ಕಾಲಮಿತಿ ವೇತನ ಬಡ್ತಿಯ ನಿಯಮಗಳ ಪ್ರಕಾರ ವೇತನ ರಹಿತ ರಜೆ ಪರಿಗಣಿಸಲು ಅವಕಾಶವಿರುವುದಿಲ್ಲವಾದ ಕಾರಣ ಸದರಿ ಉಪನ್ಯಾಸಕರುಗಳ ಕಾಲಮಿತಿ ವೇತನ ಬಡ್ತಿಯು ಅವರುಗಳ ವೇತನ ರಹಿತ ರಜೆ ಪಡೆದಿರುವಷ್ಟು ದಿನಗಳು ನಿಯಮಾನುಸಾರ ಮುಂದೂಡಲ್ಪಡುತ್ತದೆ. |

| | | |
|---|---|---|
| ಆ) | ಡಿಸೆಂಬರ್ 2020ರಲ್ಲಿ ನೇರ ನೇಮಕಾತಿಗೊಂಡು ಕಾರ್ಯ ನಿರ್ವಹಿಸುತ್ತಿರುವ ಉಪನ್ಯಾಸಕರ ಪರಿವೀಕ್ಷಣಾ ಅವಧಿಯನ್ನು 'ಪರಿವೀಕ್ಷಣಾ ಅವಧಿಯು ತೃಪ್ತಿಕರ ಸೇವಾವಧಿ' ಎಂದು ಘೋಷಣೆ ಮಾಡಲಾದ ಉಪನ್ಯಾಸಕರ ಸಂಖ್ಯೆ ಎಷ್ಟು; | ಡಿಸೆಂಬರ್ 2020ರಲ್ಲಿ ನೇರ ನೇಮಕಾತಿಗೊಂಡು ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರ ಪೈಕಿ ಪ್ರಸ್ತುತ ಎಲ್ಲಾ ಪೂರಕ ದಾಖಲೆಗಳನ್ನು ಸಮುಚಿತ ಮಾರ್ಗದಲ್ಲಿ ಸಲ್ಲಿಸಿರುವ 09 ಪ್ರಸ್ತಾವನೆಗಳಿಗೆ ಖಾಯಂ ಪೂರ್ವ ಸೇವಾವಧಿ ಘೋಷಣೆಯಾಗಿದೆ. ಉಳಿದ 612 ಉಪನ್ಯಾಸಕರ ಸೇವಾ ವಿವರಗಳು ಸ್ವೀಕೃತವಾಗಿದ್ದು ಖಾಯಂ ಪೂರ್ವ ಸೇವಾವಧಿ ಘೋಷಣೆ ಪ್ರಕ್ರಿಯೆ ಚಾಲನೆಯಲ್ಲಿದೆ. |
| ಇ) | ಒಂದು ವೇಳೆ ಉಪನ್ಯಾಸಕರ ಪರಿವೀಕ್ಷಣಾ ಅವಧಿಯನ್ನು ಪರಿವೀಕ್ಷಣಾ ಅವಧಿಯು ತೃಪ್ತಿಕರ ಸೇವಾವಧಿ ಎಂದು ಈವರೆವಿಗೂ ಘೋಷಣೆ ಮಾಡದಿರುವುದಕ್ಕೆ ಕಾರಣಗಳೇನು; ಯಾವಾಗ ಘೋಷಿಸಲಾಗುವುದು (ಸಂಪೂರ್ಣ ಮಾಹಿತಿ ನೀಡುವುದು) | 2020 ಡಿಸೆಂಬರ್‌ನಲ್ಲಿ ನೇಮಕವಾದ ಉಪನ್ಯಾಸಕರುಗಳು ಸಲ್ಲಿಸಿರುವ ಪ್ರಸ್ತಾವನೆಗಳಲ್ಲಿ ನೈಜತೆ ಪ್ರಮಾಣ ಪತ್ರ, ಸೇವಾ ದೃಢೀಕರಣ ಪ್ರಮಾಣ ಪತ್ರ ಇತ್ಯಾದಿ ದಾಖಲೆಗಳ ಕೊರತೆಯಿರುವ ಕಾರಣ ಸದರಿ ದಾಖಲೆಗಳನ್ನು ಪಡೆಯಲು ಕ್ರಮವಹಿಸಲಾಗುತ್ತಿದೆ. ಉಳಿದಂತೆ ಕೆಲವು ಉಪನ್ಯಾಸಕರ ನೇಮಕಾತಿ ಕುರಿತು ಮಾನ್ಯ ನ್ಯಾಯಾಲಯಗಳಲ್ಲಿ ಪ್ರಕರಣಗಳು ದಾಖಲಾಗಿದ್ದು, ಅಂತಹ ಪ್ರಕರಣಗಳನ್ನು ಬಾಕಿ ಇರಿಸಿ ಉಳಿದ ಪ್ರಕರಣಗಳ ಖಾಯಂ ಪೂರ್ವ ಸೇವಾವಧಿ ಘೋಷಣೆಗೆ ಕ್ರಮಕೈಗೊಳ್ಳಲಾಗುತ್ತಿದೆ. |

**ಸಂಖ್ಯೆ: ಇಪಿ 203 ಡಿಜಿಡಬ್ಲ್ಯೂ 2023**

(ಎಸ್.ಮಧು ಬಂಗಾರಪ್ಪ )
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.